## ಕಲ್ಲಿನ ರೂಪದ ಸೇಂಧ ನಮಕ

‘ಉಪ್ಪಿಗಿಂತ ರುಚಿ ಇಲ್ಲ ತಾಯಿಗಿಂತ ಬಂಧುವಿಲ್ಲ’ ಎಂಬ ಗಾದೆ ಮಾತೊಂದಿದೆ. ಉಪ್ಪು ಇಲ್ಲದೆ ಯಾವುದೇ ಅಡುಗೆ ರುಚಿ ಇರುವುದಿಲ್ಲ. ಹಾಗೆಯೇ ಸುಖ ದುಃಖ, ನೋವುನಲಿವುಗಳನ್ನು ಹಂಚಿಕೊಳ್ಳಲು ತಾಯಿಗಿಂತ ಉತ್ತಮವಾದ ಸ್ನೇಹಿತರಿಲ್ಲ. ಹದವಾದ ಉಪ್ಪಿನ ಬೆರಕೆಯಿಂದ ನಮ್ಮ ಅಡುಗೆ ಸ್ವಾದಿಷ್ಟವಾಗುತ್ತದೆ. ಈ ಚಿತ್ರದಲ್ಲಿ ಕೂಡ ದೊಡ್ಡ ದೊಡ್ಡ ಕಲ್ಲಿನ ಆಕಾರದ ಉಪ್ಪು ಕಾಣಬಹುದು. ಗುಜರಾತಿ ಭಾಷೆಯಲ್ಲಿ ಇದನ್ನು ‘ಸೇಂಧ ನಮಕ’ ಎನ್ನುತ್ತಾರೆ. ಅಲ್ಲಿನ ವಡೋದರ ನಗರದ ರಸ್ತೆಯೊಂದರಲ್ಲಿ ದಿನಾ ನಾನು ಸಾಗುವಾಗ ವಾಹನಗಳಲ್ಲಿ ಉಪ್ಪು ಮಾರುವ ಸಾಕಷ್ಟು ಜನರು ಕಾಣಸಿಗುತ್ತಾರೆ. ಇದು ಸಂಸ್ಕರಿಸಿದ ಉಪ್ಪಲ್ಲ. ಯಾವುದೇ ರೀತಿಯ ರಾಸಾಯನಿಕ ಸೇರ್ಪಡೆಯಿಂದ ಮುಕ್ತವಾದ ಈ ಉಪ್ಪು ನೈಸರ್ಗಿಕವಾಗಿ ರಚಿತವಾದದ್ದು.

ಕಲ್ಲಿನಂತೆ ಕಾಣುವ ಈ ಉಪ್ಪಿನಲ್ಲಿ ಬಿಳಿ, ಗುಲಾಬಿ, ತಿಳಿ ಕಂದು ಸೇರಿದಂತೆ ನಾನಾ ರೀತಿಯ ಬಣ್ಣಗಳನ್ನು ಕಾಣಬಹುದು. ಪಂಜಾಬ್ ಪ್ರಾಂತ್ಯದ ಜನರು ಇಲ್ಲಿ ಮಾರಾಟ ಮಾಡುತ್ತಾರೆ. ಈ ಉಪ್ಪನ್ನು ಪುಡಿ ಮಾಡಿ ಪ್ಯಾಕೆಟ್ ರೂಪದಲ್ಲೂ ಮಾರುತ್ತಾರೆ. ಬೆಲೆ ಕೆ.ಜಿ.ಗೆ 50 ರೂಪಾಯಿ. ಆರೋಗ್ಯದ ದೃಷ್ಟಿಯಿಂದ ಕೂಡ ಈ ಉಪ್ಪು ಪ್ರಯೋಜನಕಾರಿ ಎಂಬುದು ಸ್ಥಳೀಯರ ಮಾತು.

–ರತ್ನಾಶೇಖರ್ ಶೆಟ್ಟಿ, ಬರೋಡಾ





## ರೂಪಾಯಿ ನಾಣ್ಯದಲ್ಲಿ ಎಷ್ಟೊಂದು ಬಗೆ!

ಚಿತ್ರದಲ್ಲಿ ಕಾಣುತ್ತಿರುವವು ಒಂದು ರೂಪಾಯಿ ನಾಣ್ಯಗಳು. ಒಂದು ರೂಪಾಯಿ ನೋಟು ಮುದ್ರಿಸುವುದನ್ನು ನಿಲ್ಲಿಸಿದ ಮೇಲೆ ಒಂದು ರೂಪಾಯಿಯ ನಾಣ್ಯಗಳಿಗೆ ಬೇಡಿಕೆ ಹೆಚ್ಚಾಯಿತು. ಹಾಗಾಗಿ ಕಾಲಕಾಲಕ್ಕೆ ನಾಣ್ಯಗಳನ್ನು ಮುದ್ರಿಸಬೇಕಾಯಿತು. ಪ್ರತಿ ಸಲ ನಾಣ್ಯ ಮುದ್ರಿಸುವಾಗ ಒಂದು ಹೊಸ ವಿನ್ಯಾಸವನ್ನು ಅಳವಡಿಸಿಕೊಳ್ಳಬೇಕಾಯಿತು. ಇದರಿಂದಾಗಿ ಒಂದು ರೂಪಾಯಿ ನಾಣ್ಯಗಳಲ್ಲಿ ವೈವಿಧ್ಯ ಹೆಚ್ಚಿತು. ಭಾರತದ ಮಹಾಪುರುಷರ ಸ್ಮರಣಾರ್ಥ, ಕೆಲವು ವಿಶೇಷ ಘಟನೆಗಳ ಸ್ಮರಣಾರ್ಥ ಈ ನಾಣ್ಯಗಳನ್ನು ಮುದ್ರಿಸಲಾಯಿತು. ಈ ನಾಣ್ಯಗಳ ಮೇಲೆ ಮಹಾತ್ಮ ಗಾಂಧಿ, ಜವಾಹರಲಾಲ್ ನೆಹರು, ಜಯಪ್ರಕಾಶ್ ನಾರಾಯಣ್, ಮಹಾರಾಣಾ ಪ್ರತಾಪ್, ಶ್ರೀ ರಾಜೀವ ಗಾಂಧಿ ಮುಂತಾದವರ ಚಿತ್ರಗಳನ್ನು ಕಾಣಬಹುದು.

–ಮುರಳೀಧರ ಕುಲಕರ್ಣಿ, ಬೀದರ್

## ಪರಿಸರಸ್ನೇಹಿ ‘ಬಾಳೆ ದೊನ್ನೆ’

ಒಂದು ಕಾಲದಲ್ಲಿ ಬಡವ ಶ್ರೀಮಂತ ಎನ್ನದೇ ಸಾಮಾನ್ಯವಾಗಿ ಹಳ್ಳಿಮನೆಗಳಲ್ಲಿ ನಡೆಯುವ ಮದುವೆ, ಮುಂಜಿ, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಬಾಳೆ ಎಲೆಯಿಂದ ಸಿದ್ಧಗೊಂಡ ‘ದೊನ್ನೆ’ಗಳೇ ಹೆಚ್ಚಾಗಿ ಬಳಕೆಯಾಗುತ್ತಿದ್ದವು. ಸ್ಟೀಲ್ ಲೋಟಗಳನ್ನು ಅನಿವಾರ್ಯ ಸಂದರ್ಭಗಳಲ್ಲಷ್ಟೇ ಬಳಸುವುದಾಗಿತ್ತು. ಬಳಸಿ ಒಗೆಯುವ ಈಗಿನ ಪೇಪರ್ ಮತ್ತು ಪ್ಲಾಸ್ಟಿಕ್ ಲೋಟಗಳನ್ನು ನೋಡುವ ನಮಗೆ ಹಿಂದೆ ಬಳಕೆಯಲ್ಲಿದ್ದ, ಬಳಸಿ ಒಗೆಯುವ ಬಾಳೆ ಎಲೆಯ ದೊನ್ನೆಗಳು ನಿಜಕ್ಕೂ ‘ಎಕೋ ಫ್ರೆಂಡ್ಲಿ’ ಎನಿಸಿದ್ದವು. ಏಕೆಂದರೆ, ಬಾಳೆದೊನ್ನೆ ಯಾವುದೇ ಖರ್ಚು ಇಲ್ಲದೇ ತಯಾರಾಗಿ, ಬಳಕೆಯ ನಂತರವೂ ಗೊಬ್ಬರ ಗುಂಡಿಗೆ ಸೇರಿ ಗೊಬ್ಬರವಾಗುತ್ತಿತ್ತು.

ಊಟಕ್ಕೆ ಬಳಸುವ ಬಾಳೆ ಎಲೆಯನ್ನೇ ಚಿಕ್ಕ ಗಾತ್ರದಲ್ಲಿ ಕತ್ತರಿಸಿ, ಲೋಟದ ಮಾದರಿಯಲ್ಲಿ ಮಡಚಿ, ಅದು ಬಿಚ್ಚಿಕೊಳ್ಳದಂತೆ ಸಣ್ಣ ಕಡ್ಡಿಯನ್ನು ದೊನ್ನೆಯ ಎರಡೂ ಕಡೆಗಳಲ್ಲಿ ಚುಚ್ಚಿದರೆ ಬಾಳೆದೊನ್ನೆ ಸಿದ್ಧ. ಒಮ್ಮೆ ತಯಾರಿಸಿದ ಬಾಳೆದೊನ್ನೆಯನ್ನು ಒಂದು ವಾರದ ತನಕವೂ ಇಟ್ಟು ಬಳಸಬಹುದು. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪುರೋಹಿತರು ಸ್ಟೀಲ್ ಅಥವಾ ಪೇಪರ್ ಲೋಟದ ಬದಲಿಗೆ, ಲಭ್ಯವಿದ್ದರೆ ಬಾಳೆ ಎಲೆಯ ದೊನ್ನೆಯನ್ನೇ ಶಿಫಾರಸ್ಸು ಮಾಡುವುದು ಇದರ ಶ್ರೇಷ್ಠತೆಯನ್ನು ಹೇಳುತ್ತದೆ. ಕಡಿಮೆ ಅವಧಿಯಲ್ಲಿ ನೂರಾರು ಸಂಖ್ಯೆಯ ಬಾಳೆದೊನ್ನೆ ತಯಾರಿಸುವ ಕೌಶಲ್ಯ ಹಿಂದಿನ ಕಾಲದ ಅನೇಕ ಹಿರಿಯರಿಗೆ ಇದೆ. ಅವರಿಂದ ತರಬೇತಿ ಪಡೆದು ದೊನ್ನೆ ತಯಾರಿಸುವ ಕಲೆಯನ್ನು ಈಗಿನ ಯುವಕರು ಕಲಿಯುವುದು ಅವಶ್ಯವಿದೆ. ಅದಿಲ್ಲವಾದರೆ ದೊನ್ನೆ ತಯಾರಿಕೆಯು ಮರೆತುಹೋಗುತ್ತದೆ.

–ಅರ್ಚನಾ ಜಿ. ಬೊಮ್ನಳ್ಳಿ

